ಆಮೇಲೆ ವಿಚಾರ ಮಾಡೋಣ. ಮಾನ್ಯ ಲಕ್ಷ್ಮಿಸಾಗರ್‌ರವರೂ ಕೂಡ ಈ ಹುಡುಗರ ಪೂರ್ಣ ವೃತ್ತಾಂತವನ್ನು ತರಿಸಬೇಕೆಂದು ಹೇಳಿದ್ದಾರೆ ಅದರಂತೆ ಇಡೀ ಇದರ ಚರಿತ್ರೆಯನ್ನೇ ನಾನು ನೋಡಿಸುತ್ತೇನೆ.

SRI C.M. ARUMUGAM.—What about suggestion of sending members from the Council and Assembly to that spot to study and make a report.

ಶ್ರೀ ಎಸ್. ಬಂಗಾರಪ್ಪ.—ಅದು ನಿಜ. ನಿನ್ನೆ ಈ ಪ್ರಶ್ನೆ ಆ ಸದನದಲ್ಲಿ ಬಂದಾಗ ಈ ವಿಷಯವನ್ನು ಸರ್ಕಾರದ ಪರವಾಗಿ ಪ್ರಕಟ ಮಾಡಿದ್ದೇವೆ. ಅದೇ ರೀತಿ ಈ ಮನೆಯಿಂದಲೂ ಯಾರ್ಯಾರು ಸದಸ್ಯರು ಅಲ್ಲಿಗೆ ಹೋಗುತ್ತಾರೆ ತಿಳಿಸಿದರೆ ಸರ್ಕಾರ ವ್ಯವಸ್ಥೆ ಮಾಡುತ್ತದೆ. ಆ ಸದಸ್ಯರು ಜೊತೆಗೆ ಮಹಿಳಾ ಸದಸ್ಯರೂ ಕೂಡ ಹೋಗಬೇಕಾಗುತ್ತದೆ. ಏಕೆಂದರೆ ಆ ಹೆಣ್ಣುಮಗಳ ಅಭಿಪ್ರಾಯವನ್ನು ಪ್ರತ್ಯೇಕವಾಗಿ ಕೇಳಬೇಕಾಗುತ್ತದೆ. ಆದ್ದರಿಂದ ಇವತ್ತೆ ಹೋಗಬೇಕೆಂದರೂ ಕೂಡ ಬಸ್‌ನ ವ್ಯವಸ್ಥೆ ಮಾಡಿಸುತ್ತೇನೆ. ಮತ್ತೆ ಅದು ಬಹಳ ದೂರ ಏನೂ ಆಗುವುದಿಲ್ಲ. ಸತ್ಯಾಂಶವನ್ನು ತಿಳಿದುಕೊಳ್ಳುವುದಕ್ಕೆ ಸರ್ಕಾರ ಅಷ್ಟೇ ಆಸಕ್ತಿಯನು ತಳೆದಿದೆ. ಸರ್ಕಾರ ಸೂಕ್ತವಾದ ಕ್ರಮ ತೆಗೆದುಕೊಳ್ಳುತ್ತದೆ. ಮತ್ತೆ ಆ ೯ ಜನರಲ್ಲಿ ಒಬ್ಬ ವಕೀಲರ ಮಗ ಇದ್ದಾರೆ, ಆದ್ದರಿಂದ ಸರಿಯಾದ ಕ್ರಮ ತೆಗೆದುಕೊಳ್ಳಲಾರರಿ ಎಂಬುದಾಗಿ ಕೆಲವು ಸದಸ್ಯರು ಹೇಳಿದ್ದಾರೆ. ಅವರು ಯಾರ ಮಗನೇ ಆಗಲಿ, ಕಾನೂನು ಪ್ರಕಾರ ಕ್ರಮ ತೆಗೆದುಕೊಳ್ಳುತ್ತೇವೆ, ಇದರಲ್ಲಿ ಸದಸ್ಯರಿಗೆ ಅನುಮಾನ ಬೇಡ ಎಂಬುದಾಗಿ ಹೇಳುತ್ತೇನೆ.

ಅಧ್ಯಕ್ಷರು.—ಶ್ರೀಮಾನ್ ಕೊಡಗಿಯವರೇ, ನಿಮ್ಮ ವಿಚಾರದಂತಹ ರೀತಿಯಲ್ಲೇ ಶ್ರೀಮಾನ್ ಬೊಮ್ಮಾಯಿಯವರು ಒಂದು ಅಡ್ಜರ್ನ್‌ಮೆಂಟ್ ಮೋಷನ್‌ನ್ನು ಕಳುಹಿಸಿದ್ದಾರೆ. ನಿಮ್ಮಎಲ್ಲಾ ವಿಚಾರವೂ ಅದರಲ್ಲಿ ಅಡಕವಾಗಿದೆ. ಆದ್ದರಿಂದ ತಮ್ಮ ವಿಚಾರವನ್ನೂ ನಾಳೆ ಪ್ರಸ್ತಾಪ ಮಾಡುವುದಕ್ಕೆ ಅವಕಾಶ ಕೊಡುತ್ತೇನೆ.

Non Plying of K S R T C Buses to Mangalore due to flood.

† ಶ್ರೀ ಎ. ಜಿ. ಕೊಡಿಗಿ.—ನಾಳೆ ಪ್ರಸ್ತಾಪ ಮಾಡುವುದರಲ್ಲಿ ನನ್ನ ಆಕ್ಷೇಪಣೆ ಇಲ್ಲ. ಆದರೆ ಇದರಲ್ಲಿ ಬಹಳ ಗಂಭೀರವಾದ ವಿಚಾರ ಅಡಕವಾಗಿರುವುದರಿಂದ, ಹೇಳಬೇಕಾಗುತ್ತದೆ. ದಕ್ಷಿಣ ಕನ್ನಡ ಜಿಲ್ಲೆಗೆ ಹೋಗುವಂತಹ ಬಸ್ಸುಗಳು ಪೂರ್ತಿ ನಿಂತು ಹೋಗಿದ್ದು ನಮ್ಮಗಳ ಸಂಪರ್ಕವೇ ಕಡಿದು ಹೋಗಿದೆ. ಇವತ್ತು ನಮ್ಮ ಜಿಲ್ಲೆಗೆ ಯಾವ ಬಸ್ಸುಗಳೂ ಹೋಗುತ್ತಿಲ್ಲ. ಆದರೆ ಖಾಸಗಿ ಸಂಸ್ಥೆಯ ಬಸ್ಸುಗಳು ಬೇರೆ ಮಾರ್ಗವಾಗಿ ನಮ್ಮ ಜಿಲ್ಲೆಗೆ ಕೊಂಡೊಯ್ಯುತ್ತಿದ್ದಾರೆ. ಆದರೆ ನಮ್ಮ ರಾಜ್ಯ ರಸ್ತೆ ಸಾರಿಗೆ ಸಂಸ್ಥೆಯ ಬಸ್ಸುಗಳು ಒಂದೂ ನಮ್ಮ ಜಿಲ್ಲೆಗೆ ಹೋಗುವುದಿಲ್ಲ, ಆದ್ದರಿಂದ ಸಂಭಂದಪಟ್ಟ ಮಂತ್ರಿಗಳು ನಾಳೆ ಮತ್ತು ಇವತ್ತು ನಮ್ಮ ರಸ್ತೆ ಸಾರಿಗೆ ಬಸ್ಸುಗಳನ್ನು ಬೇರೆ ಮಾರ್ಗವಾಗಿ ದಕ್ಷಿಣ ಕನ್ನಡ ಜಿಲ್ಲೆಗೆ ಕಳುಹಿಸುವುದಕ್ಕೆ ಅವಕಾಶ ಇದೆ. ಆಂದರೆ ಮಡಕೇರಿ ಮಾರ್ಗವಾಗಿ ಹೋಗಬಹುದು, ಮೂಡಿಗೆರೆ ಮಾರ್ಗವಾಗಿ ಹೋಗಬಹುದು. ಈ ಮಾರ್ಗವಾಗಿ ರಾಜ್ಯ ರಸ್ತೆ ಸಾರಿಗೆ ಬಸ್ಸುಗಳನ್ನು ದಕ್ಷಿಣ ಕನ್ನಡ ಜಿಲ್ಲೆಗೆ ಓಡಿಸುವ ಆಶ್ವಾಸನೆ ಕೊಡಲಿ. ಮತ್ತೆ ಉಳಿದ ವಿಚಾರಗಳನ್ನು ನಾಳೆ ಸವಿಸ್ತಾರವಾಗಿ ಹೇಳುತ್ತೇನೆ.

ಶ್ರೀ ಕೆ. ಯೆಂಕಟಪ್ಪ.—ಇ ನೇ ತಾರಿಖೀನಿಂದ ಬಸ್ಸುಗಳು ಹೋಗತಕ್ಕಂತಹ ವ್ಯವಸ್ಥೆ ಇದೆ. ಮಾನ್ಯ ಸದಸ್ಯರು ಏನು ಪ್ರಶ್ನೆಯನ್ನು ಎತ್ತಿದ್ದಾರೆ. ಬಹುಶ : ಅದು ಸರಿಯೂದುದಲ್ಲ. ಸರಿಯಾದ ವರದಿಯನ್ನು ನಾನು ಕೊಡುತ್ತಿದ್ದೇನೆ.

ಶ್ರೀ ಎಂ. ಸಿ. ನಾನಯ್ಯ.—ಮಾನ್ಯ ತೋಟಗಾರಿಕೆ ಸಚಿವರು ಸಾರಿಗೆ ಸಚಿವರ ಪರವಾಗಿ ಹೇಳುತ್ತಿದ್ದಾರೆ. ನಾನು ನಿನ್ನೆ ರಾತ್ರಿ ೧೦ ಗಂಟೆಗೆ ಕೆ. ಎಸ್. ಆರ್. ಟಿ. ಸಿ. ಯ ಬಸ್ ನಿಲ್ದಾಣಕ್ಕೆ ದೂರವಾಣಿ ಮಾಡಿ ಬೆಂಗಳೂರಿನಿಂದ ಮಂಗಳೂರಿಗೆ, ಹಾಸನ ಮಾರ್ಗವಾಗಿ ಬಸ್ಸುಗಳು ಹೋಗುತ್ತಿವೆಯೇ ಎಂಬುದಾಗಿ ಕೇಳಿದಾಗ, ಅಲ್ಲಿನವರು, ಕೆ. ಎಸ್. ಆರ್. ಟಿ. ಸಿ ಬಸ್ಸುಗಳು ಯಾವುದೂ ಹೋಗುತ್ತಿಲ್ಲ; ಎಂಬುದಾಗಿ ಹೇಳಿದ್ದಾರೆ. ಆದರೆ. ಖಾಸಗಿ ಬಸ್ಸುಗಳು ಮಡಕೇರಿ ಮಾರ್ಗವಾಗಿ ಹೋಗುತ್ತಿವೆ. ಆದ್ದರಿಂದ ಮಾನ್ಯ ಸಚಿವರು ಈ ಸದನಕ್ಕೆ ತಪ್ಪು ತಿಳುವಳಿಕೆಯನ್ನು ಕೊಡಬಾರದು ಎಂಬುದಾಗಿ ನಾನು ತಮ್ಮ ಮೂಲಕ ಸಚಿವರಿಗೆ ತಿಳಿಸುತ್ತಿದ್ದೇನೆ.

ಶ್ರೀ ಎ. ಜಿ. ಕೊಡಗಿ.—ಶ್ರೀಮಾನ್ ನಾನಯ್ಯನವರು ನಿನ್ನೆ ರಾತ್ರಿ ವಿಷಯ ಹೇಳುತ್ತಿದ್ದಾರೆ. ಆದರೆ ನಾನು ಇವತ್ತು ಬೆಳ್ಳಿಗ್ಗೆ ೧೧ ಘಂಟೆಯಲ್ಲಿ ಕೆ. ಎಸ್. ಆರ್, ಟಿ. ಸಿ ಯ ಬಸ್ ನಿಲ್ದಾಣಕ್ಕೆ ದೂರವಾಣಿ ಮಾಡಿ ನಮಗೆ ಎರಡು ಸೀಟುಗಳನ್ನು ಮಂಗಳೂರಿಗೆ ಬುಕ್ ಮಾಡಿ ಎಂಬುದಾಗಿ ಕೇಳಿದಾಗ, ಅದಕ್ಕವರು, ಇವತ್ತು ಮಂಗಳೂರಿಗೆ ಇಲ್ಲಿಂದ ಯಾವುದೇ ಬಸ್ಸುಗಳು ಹೋಗುತ್ತಿಲ್ಲ. ಆದ್ದರಿಂದ ಸೀಟುಗಳನ್ನು ಬುಕ್ ಮಾಡುವುದಿಲ್ಲ.. ನಾಳೆಗೂ ನಾವು ಬುಕ್ ಮಾಡುವ ಸ್ಥಿತಿಯಲ್ಲಿಲ್ಲ ಎಂಬುದಾಗಿ ಹೇಳಿದ್ದಾರೆ. ಅದಕ್ಕೆ ನಾನು ಖಾಸಗಿ ಬಸ್ಸುಗಳು ಬೇರೆ ಮಾರ್ಗವಾಗಿ ಹೋಗುತ್ತಿವೆಯಲ್ಲಾ; ಎಂಬುದಾಗಿ ಕೇಳಿದಕ್ಕೆ ಅದು ಇರಬಹುದು. ಆದರೆ ನಮ್ಮ ಬಸ್ಸುಗಳನ್ನು ಬೇರೆ ಮಾರ್ಗವಾಗಿ ಓಡಿಸುವುದಕೆ ಮೇಲಿನ ಅಧಿಕಾರಿಗಳಿಂದ ಸೂಚನೆ ಬಂದಿಲ್ಲ ಎಂಬುದಾಗಿ ಸ್ಪಷ್ಟವಾಗಿ ಉತ್ತರ ಕೊಟ್ಟಿದ್ದಾರೆ. ಹಾಸನ ಮಾರ್ಗವಾಗಿ ದಕ್ಷಿಣ ಕನ್ನಡ ಜಿಲ್ಲೆಗೆ ಇವತ್ತೂ ಹೋಗುವುದಿಲ್ಲ, ನಾಳೆ ವಿಚಾರ ಇವತ್ತು ಹೇಳುವ ಸ್ಥಿತಿಯಲ್ಲಿಲ್ಲ, ಬುಕ್ ಮಾಡುವ ಸ್ಥಿತಿಯಲ್ಲಿಲ್ಲ ಅಂತ ಹೇಳಿದರು, ಈ ನೆರೆ ಹಾವಳಿಯಿಂದ ೩೦೦ ಜನ ಪ್ರಯಾಣಿಕರು ಆ ಘಾಟಿನಲ್ಲಿ ಉಳಿಯುವಂತಹ ಪ್ರಸಂಗ,... ಬಹುಶ: ಕಾಸಕನಾಗಿ ಅಲ್ಲಿ ಇಲ್ಲದಿದ್ದರೆ ಅಲ್ಲಿದ್ದಂತಹ ಅಷ್ಟು ಪ್ರಯಾಣಿಕರೂ ಇನ್ನೂ ಯಾವ ತೊಂದರೆ ಪಡೆಬೇಕಾಗಿತ್ತೋ ಗೊತ್ತಿಲ್ಲ. ಅದರ ಬಗ್ಗೆ ಹೆಚ್ಚು ಮಾತನಾಡುವುದಿಲ್ಲ. ಆದ್ದರಿಂದ ಈಗ ಮಂತ್ರಿಗಳು ರಸ್ತೆಸಾರಿಗೆ ಬಸ್ಸುಗಳನ್ನು ಬೇರೆ ಮಾರ್ಗವಾಗಿ ದಕ್ಷಿಣ ಕನ್ನಡ ಜಿಲ್ಲೆಗೆ ಕಳುಹಿಸುವಂತಹ ವ್ಯವಸ್ಥೆಯನ್ನು ದಯಮಾಡಿ ಮೊದಲು ಮಾಡಬೇಕು.

೨-೩೦ ಮಧ್ಯಾಹ್ನ

ಶ್ರೀ ಕೆ. ರಾಮ್‌ಭಟ್—ಅಧ್ಯಕ್ಷರೆ, ಈ ದಿನ ನಾನು ಊರಿಗೆ ಹೋಗಬೇಕಾಗಿತ್ತು, ಮಂಗಳೂರು-ಬೆಂಗಳೂರು ಬಸ್‌ಗಳು ಇಲ್ಲಾ ಎಂದು ಹೇಳುತ್ತಾರೆ. ಆದ್ದರಿಂದ ಮೈಸೂರು ಕಡೆಯಿಂದ ಊರಿಗೆ ಹೋಗಬೇಕಾಗಿದೆ.

ಶ್ರೀ ಕೆ. ಯಂಕಟಪ್ಪ.—ಮಾನ್ಯ ಸದಸ್ಯರಾದ ಶ್ರೀ ನಾನಯ್ಯ ಅವರು ಹಾಗೂ ಶ್ರೀ ಕೊಡಗಿ ಯವರು, ಹಾಗೂ ಶ್ರೀ ರಾಮ್‌ಭಟ್ ಅವರು ಬಸ್‌ಗಳು ಓಡಿಸಲಾಗುತ್ತಿಲ್ಲವೆಂದು ಹೇಳುತ್ತಿದ್ದಾರೆ. ಆದರೆ ಸರ್ಕಾರಕ್ಕೆ ಬಂದಿರುವ ಮಾಹಿತಿಯ ಪ್ರಕಾರ ನಿನ್ನೆ ರಾತ್ರಿ ೧೨ ಗಂಟೆಯಿಂದಲೇ ಆ ರೂಟಿನಲ್ಲಿ ಬಸ್‌ಗಳು ಓಡುತ್ತಿವೆ. ಎಲ್ಲಾ ಬಸ್‌ಗಳು ಓಡುತ್ತಿದ್ದರೂ ಮಾನ್ಯ ಸದಸ್ಯರು ಬಸ್‌ಗಳು ಹೋಗುತ್ತಿಲ್ಲವೆಂದು ಸಂಸ್ಥೆಯವರು ತಿಳಿಸಿದರೆಂದು ಹೇಳುತ್ತಿದ್ದಾರೆ. ಹಾಗೊಂದು ಪಕ್ಷ ಅವುಗಳು ಹೋಗದಿದ್ದ ಪಕ್ಷದಲ್ಲಿ ಆ ಬಗ್ಗೆ ತಕ್ಷಣದ ಕ್ರಮ ತೆಗೆದುಕೊಳ್ಳುತ್ತೇನೆ.

ಶ್ರೀ ಭೀಮಣ್ಣ ಖಂಡ್ರೆ.—ನಾನು ಒಂದು ಕಾಲಿಂಗ್ ಅಟೆನ್‌ಷನ್ ನೋಟೀಸ್ ಕಳುಹಿಸಿದ್ದೆ ಅದು ಬರಲಿಲ್ಲ.

ಅಧ್ಯಕ್ಷರು. —ಅದನ್ನು ಕಳುಹಿಸಲಾಗಿದೆ.

Statement by the Minister for Education

re-abolition of 1st year P.U.C. Public Examination

SRI G. B. SHANKAR RAO.—Sir, some of the Hon. Members have pointed out that there has been hardship to the students due to the recent order of the Goverment abolishing Ist Year P.U.C. Public Examination. I will read a statement clarifying the position. It reads :

The I Year Pre-University Public Examination was abolished in the year 1979 by Government Order No. ED 29 TPU 79 dated 12th November 1979. In its place, Government issued in an annexure to